# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಎಸ್.ಸಿ.136/2024

ಅಸಾ : 06
ಚಾಸಾ : 08

ಸಾಕ್ಷಿದಾರರ ಹೆಸರು : ರವಿ ದುಂಡಮ್ಮನವರ

ತಂದೆಯ ಹೆಸರು : ಶಂಕ್ರಪ್ಪ

ವಯಸ್ಸು : 40 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸ ಸ್ಥಳ : ಸಂಗೂರು.

ದಿನಾಂಕ: **04/06/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ: –**

1. ಇಂದು ಹಾಜರಿರುವ 1 ನೇ ಆರೋಪಿ ನನಗೆ ಗೊತ್ತಿಲ್ಲ. 8-9 ತಿಂಗಳ ಹಿಂದೆ ನನ್ನ ಮೊಬೈಲ್ ಕಳೆದಿತ್ತು. 9916961256 ನನ್ನ ಮೊಬೈಲ್ ಸಂಖ್ಯೆಯಾಗಿತ್ತು. ಸಿಮ್ ಕಾರ್ಡನ್ನು ಕಾರ್ಬನ್ ಹ್ಯಾಂಡಸೆಟ್ ನಲ್ಲಿ ಹಾಕಿ ಉಪಯೋಗಿಸುತ್ತಿದ್ದೆ. ನನ್ನಿಂದ ಸದರಿ ಮೊಬೈಲನ್ನು ಯಾವುದೇ ವ್ಯಕ್ತಿ ತೆಗೆದುಕೊಂಡಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ, ಹೇಳಿಕೆ ಪಡೆದಿಲ್ಲ ಮತ್ತು ಸ್ವತ್ತನ್ನು ಜಪ್ತಿಮಾಡಿಲ್ಲ.

*(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ದಾಖಲೆಗಳನ್ನು ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

**ಪಾಟೀ ಸವಾಲು: ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ: –**

2. 1 ನೇ ಆರೋಪಿ ನನಗೆ ಪರಿಚಿತ ವ್ಯಕ್ತಿಯಿದ್ದು, ಒಂದು ಬಾರಿ 2 ಮತ್ತು 3 ನೇ ಆರೋಪಿತರೊಂದಿಗೆ ನನ್ನಲ್ಲಿಗೆ ಬಂದು ತನಗೆ ಹಣದ ಅಡಚಣೆ ಇದೆ ಎಂದು ಹೇಳಿ ಒತ್ತಾಯದಿಂದ ಟೆಕ್ನೋ ಕಂಪನಿಯ ಮೊಬೈಲನ್ನು ನನ್ನ ಸ್ವಾಧೀನಕ್ಕೆ ಕೊಟ್ಟು ರೂ.2,000/- ಪಡೆದುಕೊಂಡು ಹೋಗಿ ನಂತರ ನಾನು ಒತ್ತಾಯ ಮಾಡಿದಾಗ ರೂ.2,000/- ಮರುಪಾವತಿ ಮಾಡಿದ್ದು, ಮೊಬೈಲ್ ಪೋನ ನನ್ನಲ್ಲಿಯೇ ಉಳಿದಿತ್ತು ಎನ್ನುವುದು ಸುಳ್ಳು. ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ

ವಿಚಾರಿಸಿದಾಗ ಈಗ ಓದಿ ಹೇಳಿದ ನಿಪಿ-12 ರಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸುಳ್ಳು. ನಂತರ ಮಮಾ-2 ನ್ನು ಪೊಲೀಸರ ಮುಂದೆ ಹಾಜರುಮಾಡಿದ್ದೆ ಎನ್ನುವುದು ಸುಳ್ಳು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರಃ ಶ್ರೀ ಎನ್.ಜಿ.ಎಚ್. ವಕೀಲರಿಂದಃ–**

ಇಲ್ಲ.

**ಪಾಟೀ ಸವಾಲುಃ 3 ನೇ ಆರೋಪಿ ಪರಃ ಶ್ರೀ ಡಿ.ಟಿ.ಬಿ. ವಕೀಲರಿಂದಃ–**

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.